# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 557/2022**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಪೀರಖಾನ.**

**ದೋಷಾರೋಪಣೆ**

**ಆರೋಪಿತರುಃ**

1. ಪೀರಖಾನ ತಂದೆ ಮಹಿಬೂಬಖಾನ ಪಟ್ನಂ,
ವಃ 70 ವರ್ಷ,
ಉಃ ಒಕ್ಕಲುತನ,
ಸಾಃ ವಂಕಸಂಬ್ರ ಗ್ರಾಮ,
ತಾಃ ಗುರುಮಿಠಕಲ್ ಮತ್ತು ಜಿಃ ಯಾದಗರಿ.

ದಿನಾಂಕ 16.02.2022 ರಂದು ಮಃ 02.30 ಗಂಟೆ ಸುಮಾರಿಗೆ ವಂಕಸಂಬ್ರ ಸೀಮಾಂತರದ ತಮ್ಮ ಹೊಲದ ಬದುವಿನಲ್ಲಿರುವ ಹುಣಿಸೆ ಮರದ ಹಣ್ಣನ್ನು ಆರಿಸಲು ಹೋಗಿ ಚಾಸಾಃ1 ನೇದ್ದವಳು ಮರದ ಕೆಳಗೆ ಬಿದ್ದ ಹುಣಿಸೆ ಹಣ್ಣನ್ನು ಆರಿಸುತ್ತಿದ್ದಾಗ ಆರೋಪಿಯಾದ ನೀನು ಅಲ್ಲಿಗೆ ಹೋಗಿ ಏಕಾಏಕಿ ಚಾಸಾಃ1 ನೇದ್ದವಳ ಹತ್ತಿರ ಬಂದು ಸೂಳೆ ಮಗಳೇ ಈ ಹುಣಸೆ ಹಣ್ಣು ಮರ ಯಾರಪ್ಪದು ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ:1 ರವರ ಸೀರೆಯ ಸೆರಗಳನ್ನು ಹಿಡಿದು ಎಳೆದಾಡಿ ಬಲಗೈಯನ್ನು ಜೋರಾಗಿ ತಿರುಗಿಸಿ ಕೆಳಗೆ ತಳ್ಳಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.354 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ:1 ರವರನ್ನು ಕಾಲಿನಿಂದ ಹೊಟ್ಟೆಯ ಭಾಗಕ್ಕೆ ಒದ್ದು ಕೈಯಿಂದ ಎದೆಯ ಮತ್ತು ಬೆನ್ನಿನ ಭಾಗಕ್ಕೆ ಹೊಡೆದು ಕೂದನ್ನು ಹಿಡಿದು ಜಗ್ಗಾಡಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.323 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ:1 ರವರನ್ನು ಇನ್ನೊಂದು ಸಲ ನಮ್ಮ ಹುಣಸೆ ಮರದ ಕಡೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬೀಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **12.03.2024.**
ಸ್ಥಳಃ ಯಾದಗಿರಿ

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ಯಾದಗಿರಿ.